**All India Radio: Bangalore**
**National Bulletin In Kannada**
**28.01.2026  1.10 p.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**28.01.2026  1.10 p.m.**
**<><><><>**

ಮುಖ್ಯಾಂಶಗಳು

1. ಸಂಸತ್ತಿನ ಬಜೆಟ್ ಅಧಿವೇಶನ ಆರಂಭ; ನಾಳೆ ಆರ್ಥಿಕ ಸಮೀಕ್ಷೆ ಮಂಡನೆ
2. ಸರ್ಕಾರದ ಪ್ರಯತ್ನಗಳಿಂದಾಗಿ ೯೫ ಕೋಟಿ ಭಾರತೀಯರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ಲಭ್ಯ- ರಾಷ್ಟ್ರಪತಿ ದ್ರೌಪದಿ ಮುರ್ಮು
3. ಜಾತಿ ತಾರತಮ್ಯ ನಿವಾರಣೆ ಸಂಬಂಧ ಯುಜಿಸಿಯ ಹೊಸ ಮಾರ್ಗಸೂಚಿ ದುರ್ಬಳಕೆಗೆ ಅವಕಾಶವಿಲ್ಲ- ಸಚಿವ ಧರ್ಮೇಂದ್ರ ಪ್ರಧಾನ್
4. ಮಹಾರಾಷ್ಟ್ರದ ಬಾರಾಮತಿಯಲ್ಲಿ ವಿಮಾನ ಪತನ: ಉಪಮುಖ್ಯಮಂತ್ರಿ ಅಜಿತ್ ಪವಾರ್ ಸೇರಿ ಐವರ ಸಾವು
5. ಏಕದಿನ ಕ್ರಿಕೆಟ್ ಸರಣಿ: ವಿಶಾಖಪಟ್ಟಣದಲ್ಲಿಂದು ನಾಲ್ಕನೇ ಪಂದ್ಯದಲ್ಲಿ ಭಾರತ -ನ್ಯೂಜಿಲೆಂಡ್ ಹಣಾಹಣಿ

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್ತಿನ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಬಜೆಟ್ ಅಧಿವೇಶನ ಆರಂಭಗೊಂಡಿದೆ. ರಾಷ್ಟ್ರಪತಿ ತಮ್ಮ ಭಾಷಣದಲ್ಲಿ ಕಳೆದ ವರ್ಷ ಭಾರತದ ಪಾಲಿಗೆ ಅತ್ಯಂತ ಸ್ಮರಣೀಯ ವರ್ಷವಾಗಿತ್ತು. ರಾಷ್ಟ್ರೀಯ ಗೀತೆ ವಂದೇ ಮಾತರಂ ೧೫೦ ವರ್ಷ ಪೂರ್ಣಗೊಳಿಸಿತ್ತು. ದೇಶ ಗುರುತೇಜ್ ಬಹದ್ದೂರ್, ಬಿರ್ಸಾ ಮುಂಡಾ, ಸರ್ದಾರ್ ಪಟೇಲ್ ಅವರಂತಹ ಮಹನೀಯ ವ್ಯಕ್ತಿಗಳನ್ನು ಹಾಗೂ ಅವರ ಕೊಡುಗೆಗಳನ್ನು ಸ್ಮರಿಸುತ್ತಿದೆ. ಅವರ ಆದರ್ಶಗಳಿಂದ ಹೊಸ ಪೀಳಿಗೆಗೆ ವಿಕಸಿತ ಭಾರತದತ್ತ ನಮ್ಮ ಪಯಣವನ್ನು ಚುರುಕುಗೊಳಿಸಲು ಸ್ಫೂರ್ತಿ ದೊರಕುತ್ತಿದೆ ಎಂದು ಹೇಳಿದರು. ೨೦೨೬ನೇ ವರ್ಷದೊಂದಿಗೆ ಭಾರತ, ಈ ಶತಮಾನದ ೨ನೇ ಹಂತ ಪ್ರವೇಶಿಸಿದ್ದು, ದೇಶ ಈ ಶತಮಾನದ ಮೊದಲ ೨೫ ವರ್ಷಗಳಲ್ಲಿ ಹಲವು ಸಾಧನೆಗಳನ್ನು ಮಾಡಿದೆ. ಅದರಲ್ಲೂ ವಿಶೇಷವಾಗಿ ಕಳೆದ ಹತ್ತು-ಹನ್ನೊಂದು ವರ್ಷಗಳಲ್ಲಿ ಭಾರತ ಪ್ರತಿಯೊಂದು ವಲಯದಲ್ಲೂ ತನ್ನ ಬುನಾದಿಯನ್ನು ಬಲವರ್ಧನೆಗೊಳಿಸಿಕೊಂಡಿದೆ. ಈ ವರ್ಷ ವಿಕಸಿತ ಭಾರತ ನಿಟ್ಟಿನಲ್ಲಿ ನಮ್ಮ ಪಯಣಕ್ಕೆ ಅತ್ಯಂತ ಮಹತ್ವದ್ದಾಗಿದೆ. ಭಾರತ ಕ್ಷಿಪ್ರ ಪ್ರಗತಿಯತ್ತ ದಾಪುಗಾಲು ಹಾಕಿದೆ. ಸರ್ಕಾರ ಈಶಾನ್ಯ ರಾಜ್ಯಗಳಲ್ಲಿ ೬೦ ಸಾವಿರದ ೨೦೦ ಕಿಲೋಮೀಟರ್‌ಗೂ ಅಧಿಕ ರಾಷ್ಟ್ರೀಯ ಹೆದ್ದಾರಿಗಳನ್ನು ನಿರ್ಮಿಸಿದೆ ಎಂದು ತಿಳಿಸಿದರು.

**ಧ್ವನಿ: ರಾಷ್ಟ್ರಪತಿ ದ್ರೌಪದಿ ಮುರ್ಮು ( ೩೩ ಸೆಕೆಂಡ್ಸ್) ವಿಕಸಿತ ಭಾರತ**

ತಮ್ಮ ಸರ್ಕಾರ ದಲಿತರು, ಹಿಂದುಳಿದವರು, ಆದಿವಾಸಿಗಳು ಸೇರಿದಂತೆ ಎಲ್ಲಾ ವರ್ಗದವರ ಏಳಿಗೆಗಾಗಿ ಶ್ರಮಿಸುತ್ತಿದೆ. ಸರ್ಕಾರ ಕೈಗೊಂಡ 'ಸಬ್ ಕ ಸಾತ್, ಸಬ್ ಕ ವಿಕಾಸ್' ಉಪಕ್ರಮ ಪ್ರತಿಯೊಬ್ಬ ಪ್ರಜೆಯ ಮೇಲೂ ಸಕಾರಾತ್ಮಕ ಪರಿಣಾಮವನ್ನು ಬೀರಿದೆ. ೨೦೧೪ರಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳು ಕೇವಲ ೨೫ ಕೋಟಿ ಜನರಿಗೆ ತಲುಪುತ್ತಿದ್ದವು. ಇದೀಗ ಸರ್ಕಾರದ ನಿರಂತರ ಪ್ರಯತ್ನಗಳ ಪರಿಣಾಮ ೯೫ ಕೋಟಿ ಭಾರತೀಯರಿಗೆ ಸಾಮಾಜಿಕ ಭದ್ರತಾ ಯೋಜನೆಗಳ ಪ್ರಯೋಜನ ದೊರಕುತ್ತಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ಇದೇ ವೇಳೆ ರಾಷ್ಟ್ರಪತಿ ಅವರು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆ ಯೋಜನೆಗಳಾದ ಆಯುಷ್ಮಾನ್ ಭಾರತ್, ಉಜ್ವಲ ಯೋಜನೆ, ಸೇರಿದಂತೆ ಹಲವು ಯೋಜನೆಗಳ ಪ್ರಗತಿಯನ್ನು ವಿವರಿಸಿದರು ಮತ್ತು ಸರ್ಕಾರದ ಪ್ರಗತಿಪರ ನೀತಿ ಹಾಗೂ ಮನಸ್ಥಿತಿಯಿಂದಾಗಿ ದೇಶದಲ್ಲಿ ಮಹಿಳೆಯರು ಎಲ್ಲಾ ವಲಯಗಳಲ್ಲಿ ಕ್ಷಿಪ್ರ ಪ್ರಗತಿಯನ್ನು ಸಾಧಿಸುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

**ಧ್ವನಿ: ರಾಷ್ಟ್ರಪತಿ ದ್ರೌಪದಿ ಮುರ್ಮು - ( ೩೫ ಸೆಕೆಂಡ್ಸ್) ವುಮೆನ್ಸ್**

ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗ ಹಾಗೂ ಅಭಿವೃದ್ಧಿಗಾಗಿ ಹೊಸ ಕಾಯ್ದೆ ವಿಕಸಿತ ಭಾರತ ಜಿ ರಾಮ್ ಜಿ ಜಾರಿಗೊಳಿಸಲಾಗಿದ್ದು, ಅದರಿಂದ ೧೨೫ ದಿನ ಉದ್ಯೋಗ ಖಾತರಿಯಾಗಿದೆ. ಹಿಂದೆ ಯೋಜನೆಯಲ್ಲಿ ಆಗುತ್ತಿದ್ದ ಸೋರಿಕೆಯನ್ನು ಹಾಗೂ ಭ್ರಷ್ಟಾಚಾರವನ್ನು ಸಂಪೂರ್ಣವಾಗಿ ತಡೆಗಟ್ಟಲು ಕಾಯ್ದೆ ತಿದ್ದುಪಡಿ ಮಾಡಲಾಗಿದೆ. ಇದರಿಂದ ಗ್ರಾಮಗಳ ಅಭಿವೃದ್ಧಿಗೆ ಹೊಸ ಆಯಾಮ ದೊರಕಲಿದೆ ಎಂದು ರಾಷ್ಟ್ರಪತಿ ವಿವರಿಸಿದರು. ನಾಳೆ ಆರ್ಥಿಕ ಸಮೀಕ್ಷೆಯನ್ನು ಮಂಡಿಸಲಾಗುವುದು ಮತ್ತು ಫೆಬ್ರವರಿ ೧ ರಂದು ಭಾನುವಾರ ೨೦೨೬-೨೭ನೇ ಸಾಲಿನ ಕೇಂದ್ರ ಬಜೆಟ್ ಮಂಡಿಸಲಾಗುವುದು.  ಬಜೆಟ್ ಅಧಿವೇಶನದ ಮೊದಲ ಹಂತವು ಇಂದಿನಿಂದ ಮುಂದಿನ ತಿಂಗಳ ೧೩ ರವರೆಗೆ ನಡೆಯಲಿದೆ. ಎರಡನೇ ಹಂತವು ಮಾರ್ಚ್ ೯ ರಿಂದ ಏಪ್ರಿಲ್ ೨ ರವರೆಗೆ ನಡೆಯಲಿದೆ. ಬಜೆಟ್ ಅಧಿವೇಶನದಲ್ಲಿ ೩೦ ಸಭೆಗಳು ನಡೆಯಲಿವೆ.

<><><><>

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು, ನವದೆಹಲಿಯಲ್ಲಿಂದು ಕಾರ್ಯಪ್ಪ ಪರೇಡ್ ಮೈದಾನದಲ್ಲಿ ನಡೆಯುವ ವಾರ್ಷಿಕ ಎನ್‌ಸಿಸಿ ಪಿಎಂ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.  ಈ ವರ್ಷದ ರ್‍ಯಾಲಿಯ ವಿಷಯ ರಾಷ್ಟ್ರ ಪ್ರಥಮ - ಕರ್ತವ್ಯ ನಿಷ್ಠ ಯುವಜನತೆ' ಎಂಬುದಾಗಿದೆ. ಈ ರ್‍ಯಾಲಿಯು ಭಾರತದ ಯುವಜನತೆಯಲ್ಲಿ ಕರ್ತವ್ಯ, ಶಿಸ್ತು ಮತ್ತು ರಾಷ್ಟ್ರೀಯ ಬದ್ಧತೆಯ ಮನೋಭಾವವನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಮಂತ್ರಿಗಳ ಕಚೇರಿ ಹೇಳಿಕೆಯಲ್ಲಿ ತಿಳಿಸಿದೆ. ಎನ್‌ಸಿಸಿ ಪಿಎಂ ರ್‍ಯಾಲಿಯು ಒಂದು ತಿಂಗಳ ಕಾಲ ನಡೆದ ಎನ್‌ಸಿಸಿ ಗಣರಾಜ್ಯೋತ್ಸವ ಶಿಬಿರ ೨೦೨೬ರ ಭವ್ಯ ಸಮಾರೋಪದ ಭಾಗವಾಗಿದೆ. ಇದರಲ್ಲಿ ೮೯೮ ಬಾಲಕಿಯರ ಕೆಡೆಟ್‌ಗಳು ಸೇರಿ ದೇಶಾದ್ಯಂತ ಎರಡು ಸಾವಿರದ ೪೦೬ ಎನ್‌ಸಿಸಿ ಕೆಡೆಟ್‌ಗಳು ಭಾಗವಹಿಸಿದ್ದರು. ರ್‍ಯಾಲಿಯಲ್ಲಿ ೨೧ ವಿದೇಶಗಳಿಂದ ೨೦೭ ಯುವಕರು ಮತ್ತು ಅಧಿಕಾರಿಗಳು ಭಾಗವಹಿಸಲಿದ್ದಾರೆ.

<><><><>

ಹೊಸ ವಿಶ್ವವಿದ್ಯಾಲಯ ಅನುದಾನ ಆಯೋಗ- ಯುಜಿಸಿ ಮಾರ್ಗಸೂಚಿಯಲ್ಲಿ ಕ್ಯಾಂಪಸ್‌ಗಳಲ್ಲಿನ ಜಾತಿ ತಾರತಮ್ಯ ನಿವಾರಣೆ ಸಮಸ್ಯೆಗಳನ್ನು ಬಗೆಹರಿಸಲಾಗುವುದು ಮತ್ತು ಮಾರ್ಗಸೂಚಿಗಳನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದಿಲ್ಲ ಎಂದು ಕೇಂದ್ರ ಸರ್ಕಾರ ಭರವಸೆ ನೀಡಿದೆ. ಮಾಧ್ಯಮಗಳೊಂದಿಗೆ ಮಾತನಾಡಿದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ಜಾತಿ ಹೆಸರಿನಲ್ಲಿ ತಾರತಮ್ಯ ಮಾಡುವ ಕುರಿತು ಕಾನೂನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ನೀಡದಿರುವುದು ಕೇಂದ್ರ, ರಾಜ್ಯ ಸರ್ಕಾರಗಳು ಮತ್ತು ಯುಜಿಸಿ ಯ ಜವಾಬ್ದಾರಿಯಾಗಿದೆ ಎಂದರು. ಜಾತಿ ತಾರತಮ್ಯ ವಿಚಾರ ಸುಪ್ರೀಂಕೋರ್ಟ್‌ನ ಮೇಲ್ವಿಚಾರಣೆಯಲ್ಲಿದೆ ಮತ್ತು ಎಲ್ಲಾ ವರ್ಗಗಳನ್ನು ಸಂವಿಧಾನದಡಿ ಒಂದೇ ರೀತಿಯಲ್ಲಿ ನೋಡಲಾಗುವುದು ಎಂದು ಅವರು ಹೇಳಿದ್ದಾರೆ.

**ಧ್ವನಿ: ಧರ್ಮೇಂದ್ರ ಪ್ರಧಾನ್ ( ೨೦ ಸೆಕೆಂಡ್ಸ್)**

ಇದೇ ೧೩ ರಂದು ಯುಜಿಸಿ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೊಸ ಮಾರ್ಗಸೂಚಿಯನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಜಾತಿ ತಾರತಮ್ಯ ಕುರಿತ ಸಮಸ್ಯೆಗಳನ್ನು ಬಗೆಹರಿಸಲು ಸಹಾಯವಾಣಿ ಆರಂಭಿಸುವುದು, ಕುಂದುಕೊರತೆ ನಿವಾರಣಾ ವ್ಯವಸ್ಥೆ ಮತ್ತು ಸಮಾನ ಅವಕಾಶಗಳ ಸಮಿತಿಗಳನ್ನು ರಚಿಸುವ ಪ್ರಸ್ತಾಪ ಒಳಗೊಂಡಿದೆ.

<><><><>

ಮಹಾರಾಷ್ಟ್ರದ ಬಾರಾಮತಿ ವಿಮಾನ ನಿಲ್ದಾಣದ ಬಳಿ ಇಂದು ಬೆಳಗ್ಗೆ ಖಾಸಗೀ ವಿಮಾನವೊಂದು ಪತನವಾಗಿದ್ದು, ಅದರಲ್ಲಿ ಪ್ರಯಾಣಿಸುತ್ತಿದ್ದ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಹಾಗೂ ಎನ್‌ಸಿಪಿ ನಾಯಕ ಅಜಿತ್ ಪವಾರ್ ಸೇರಿದಂತೆ ಐವರು ಸಾವನ್ನಪ್ಪಿದ್ದಾರೆ. ವೈಮಾನಿಕ ನಿರ್ದೇಶನಾಲಯ ಡಿಜಿಸಿಎ ಇದನ್ನು ಖಚಿತಪಡಿಸಿದ್ದು, ಖಾಸಗೀ ಜೆಟ್ ವಿಮಾನ ಬೆಳಗ್ಗೆ ೮.೪೫ ರ ಸುಮಾರಿಗೆ ಬಾರಾಮತಿ ವಿಮಾನ ನಿಲ್ದಾಣದ ಬಳಿ ಇಳಿಯಲು ಯತ್ನಿಸಿದಾಗ ಈ ದುರ್ಘಟನೆ ಸಂಭವಿಸಿದೆ. ವಿಮಾನದಲ್ಲಿ ಅಜಿತ್ ಪವಾರ್, ಅವರ ಇಬ್ಬರು ಭದ್ರತಾ ಸಿಬ್ಬಂದಿ, ಓರ್ವ ಸಹಾಯಕ ಹಾಗೂ ಇಬ್ಬರು ಚಾಲಕರು ಸೇರಿದಂತೆ ಐದು ಮಂದಿ ಇದ್ದರು. ಯಾರೊಬ್ಬರೂ ಬದುಕುಳಿದಿಲ್ಲ ಎಂದು ಪ್ರಾಥಮಿಕ ವರದಿಗಳು ತಿಳಿಸಿವೆ. ಅಜಿತ್ ಪವಾರ್, ಬಾರಾಮತಿಯಲ್ಲಿ ಇಂದು ಜಿಲ್ಲಾ ಹಾಗೂ ಪಂಚಾಯಿತಿ ಚುನಾವಣೆಗಳ ರ್‍ಯಾಲಿಯಲ್ಲಿ ಭಾಗವಹಿಸುವ ಕಾರ್ಯಕ್ರಮವಿತ್ತು. ೧೯೫೯ರ ಜುಲೈ ೨೨ ರಂದು ಅಹಮದ್‌ನಗರ ಜಿಲ್ಲೆಯ ರಹೂರಿ ತಾಲೂಕಿನ ದೇವಾಲಿಯಲ್ಲಿ ಜನಿಸಿದ್ದ ಅವರು ಮಹಾರಾಷ್ಟ್ರದ ಪ್ರಮುಖ ರಾಜಕೀಯ ನಾಯಕರಾಗಿ ಬೆಳೆದಿದ್ದರು. ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಸೇರಿದಂತೆ ಹಲವು ಗಣ್ಯರು ಅಜಿತ್ ಪವಾರ್ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

<><><><>

ದೇಶಾದ್ಯಂತ ಜಲಸಂರಕ್ಷಣೆಗೆ ಸರ್ಕಾರ ೩೨ ಸಾವಿರ ಕೋಟಿ ರೂಪಾಯಿಗಳನ್ನು ಕಾಯ್ದಿರಿಸಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್ ಹೇಳಿದ್ದಾರೆ. ಅವರು ದೆಹಲಿಯಲ್ಲಿ ಜಲ ಯೋಧರೊಂದಿಗೆ ಸಂವಾದ ನಡೆಸಿ, ಶೇಕಡಾ ೬೫ ರಷ್ಟು ಮನ್ರೇಗಾ ನಿಧಿಯನ್ನು ಜಲಸಂರಕ್ಷಣೆ ಮತ್ತು ಜಲ ಸಂಬಂಧಿ ಕಾಮಗಾರಿಗಳಿಗೆ ಬಳಕೆ ಮಾಡಲಾಗುತ್ತಿದೆ ಎಂದರು.

<><><><>

ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವೆ ವಿಶಾಖಪಟ್ಟಣದಲ್ಲಿಂದು ಐದು ಪಂದ್ಯಗಳ ಟಿ-೨೦ ಕ್ರಿಕೆಟ್ ಸರಣಿಯ ನಾಲ್ಕನೇ ಪಂದ್ಯ ನಡೆಯಲಿದೆ. ಪಂದ್ಯ ಸಂಜೆ ೭ ಗಂಟೆಗೆ ಆರಂಭವಾಗಲಿದೆ. ಈಗಾಗಲೇ ೩-೦ ಅಂತರದ ಮುನ್ನಡೆಯೊಂದಿಗೆ ಸರಣಿ ಗೆದ್ದುಕೊಂಡಿರುವ ಸೂರ್ಯಕುಮಾರ್ ನಾಯಕತ್ವದ ಭಾರತ ತಂಡ ಗೆಲುವಿನ ನಾಗಾಲೋಟ ಮುಂದುವರಿಸಿಕೊಂಡು ಹೋಗುವ ವಿಶ್ವಾಸದಲ್ಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>